doc-12
T-P-2

Regd No M 1259 | 43rd Year | Sri 'Satyavadi' Mysore | 16—3—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಸ್ಥಾಪಕರು— ಅರಮನೆ ಸಂಸ್ಥೇದಾರ್ ಎ. ಎ ಸುಬ್ಬರಾಯುರು [ಬಿಡಿ ಪ್ರತಿಗೆ ೨ ಪೈ

ಕಾಶ್ಮೀರ ಸಮಸ್ಯೆ ನಿರ್ಮಾಣ ಸಾಮಾಜಪಹಾಗಳ ತಂತ

ಶ್ರೀನಗರ 15 — ರಷ್ಯದ ವಿದೇಶ ಸಂಪರ್ಕ ಫಮಿತಿ ಅಧ್ಯಕ್ಷರಾದ ಎ ಮುಖಿಟ'ಡಿನೋವ' ಪ್ರಾವ್ದಭಯ ವಾ ನಪತ್ರಕ್ಕೆ ಉತ್ತರಕೊಡುತ್ತಾ,, ಕಾಶ್ಮೀ ರವು ಭಾರತದ ಗಣರಾಜ್ಯದಲ್ಲೊಂದು ಪ್ರಾಂತ ಎಂಬ ತಮ್ಮ ರಾಷ್ಟ್ರದ ನಿಲು ವನ್ನು ಮತ್ತೆ ಸ್ಪಷ್ಟಪಡಿಸಿದರು ಕಾಶ್ಮೀ ರದ ಮುಂದಿನ ಮಾರ್ಗವನ್ನು ಪ್ರಾಮಾ ಜನಾದಗಳು ಕೃತಕವಾಗಿ ನಿರ್ಮಿಸುವ ರೆಂದು ಅವರು ಹೇಳಿದರು

ಹಿರ್ವನ ಮರಣ

ಬಿಜಾಪುರ 15 — ಇಲ್ಲಿ ಗೆ 15 ಮೈಲಿಗಳ ದೂರವಿರುವ ಬಿಜಾಪುರ— ಹೋಲಾಪ್ಪರ ರಸ್ತೆಯಲ್ಲಿ ಮೋಟಾರು ಅನಾ ಹುತವಾಗಿ ಬಿರ್ವ ಮರಣಹೊಂದಿ 8 ಜನ ರಿಗೆ ಗಾಯವಾಗಿದೆ

ಉದ್ಘಾಟನೆ

ಹಿರೇಕೂಡ್ 15 — ಹಿರೇಕೂಡ್ ಅ ಣೆಕಟ್ಟಿನ ಗಾಂಧಿ ಮಿನಾರಿನ ಅರಂಭ ವನ್ನು ಡಾ|| ಹರೇಕೃಷ್ಣ ಮೆಹತಾಬರು ನೆರವೇರಿಸಿದರು

ಮೈಸೂರಲ್ಲಿ ಕಾಂಗ್ರೆಸ್

ನವ ದೆಹಲಿ 15 — ಕಾಂಗ್ರೆಸಿನ ಬ ರುವ ಅಧಿವೇಶನ ಮೈಸೂರಿನಲ್ಲಿ ಸಮಾ ವೇಶವಾಗುವದು.

ಮೆರವಣಿಗೆ

ನವ ದೆಹಲಿ 15 — ಪಂಜಾಬಿನಲ್ಲಿ ನಿನ್ನೆದ್ದಾಂಗಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುತ್ತಿರುವದೆಂಬ ಆರೋಪದಿಂದ ಭಾರತದ ನಾನಾ ಭಾಗಗಳಿಂದ ಆಗಮಿ ಸಿದ್ದ ಅರ್ಧ ಲಕ್ಷಕ್ಕೂ ಮಿಗಾರಿದ ಸಿಕ್ ಜನರು ಪ್ರತಿಭಟನಾ ಮೆರವಣಿಗೆ ನಡೆಸಿ ದರು ಮೆರವಣಿಗೆಯಲ್ಲಿ 10 ಸಾವಿರ ಮಹಿಳೆಯರು ಭಾಗವಹಿಸಿದ್ದರು

ಮೇ | ರಿಂದ ಪರೀಕ್ಷೆ

ಭಾರತವಾಂ ಬೆಂಗಳೂರಿನಲ್ಲಿ ಸಮಾ ನೇಶವಾಗಿದ್ದ ಮೈಸೂರು ವಿಶ್ವವಿದ್ಯಾ ನಿಲಯದ ಸಿಂಡಿಕೇಟು ಪ್ರೀ-ಪ್ರೊಫೆಷ ನಲ್ ಪರೀಕ್ಷೆಗಳನ್ನು ಮೇ 1 ರಿಂದ ನಡೆ ಸಬೇಕೆಂದು ತೀರ್ಮಾನ ಮಾಡಿರುವದೆಂ ದು ಗೊತ್ತಾಗಿದೆ

ನೇಪಾಳಕ್ಕೆ ನೆರವು

ಕಲ್ಕತ್ತಾ 14 — ಭಾರತ ನೇಪಾಳ ಧಾನ್ಯಕ್ಕೆ ಮುಂದಿನ ಹಣಕಾಸಿನ ವರ್ಷ ಕ್ಕೆ ರೂ 1 ಕೋಟಿ 90 ಲಕ್ಷ ಒದಗಿಸಿದೆ

2 ಸಹಸ್ರ ಮಂದಿಯ ಕೊಲೆ

ವಾರಾಂತ್ಯದಲ್ಲಿ ಮಾಸೂಲಿಸಲ್ಲಾದ ಭೀಕರ ದಂಗೆಯಲ್ಲಿ 2 ಸಾವಿರ ಜನ ಹತ ರಾದರೆಂದು ಪ್ರಕಟವಾಗಿದೆ

ಪರಿಸ್ಥಿತಿ ತೃಪ್ತಿಕರ

ಭಾರತದಲ್ಲಿ ಈ ವರ್ಷ ಅಕ್ಕಿ ಪರಿ ಸ್ಥಿತಿ ತೃಪ್ತಿಕರವಾಗಿರುವದೆಂದು ನವ ದೆಹಲಿಯಲ್ಲಿ ಪ್ರಕಟವಾದ ಆಹಾರ ಮಂತ್ರಿ ವಲಯದ ಪ್ರಕಟಣೆ ತಿಳಿಸುತ್ತದೆ

ಗೋಪಾಲ್ ಹೇಳಿಕೆ

ನವ ದೆಹಲಿ 15 — ರೈತ ಸಭೆ ಅ ತ್ಯಯದ ಜಳ್ಳುವಳಿಯಲ್ಲಿ 9 ಜನರು ಮರ ಣಹೊಂದಿ 12 ಸಹಸ್ರ ಜನ ಪಂಜಾಬಿ ನಲ್ಲಿ ಬಂಧಿತರಾಗಿರುವರೆಂದು ಶ್ರೀ ಎ ಕೆ ಗೋಪಾಲ್ ಹೇಳಿದ್ದಾರೆ.

o o

ನವ ದೆಹಲಿ 14 — ಪಾರ್ಲಿಮೆಂಟಿ ನ ಕಮ್ಯುನಿಸ್ಟ್ ಸದಸ್ಯರಾದ ಶ್ರೀ ಎ ಕೆ ಗೋಪಾಲ್ ಪಂಜಾಬು ಸರ್ಕಾರದ ಗ ಡೀಪಾರು ಆಜ್ಞೆ ಉಲ್ಲಂಘಿಸಿ ಹೋದಾ ಗ ಚಂಡೀಘರ್‌ನಲ್ಲಿ ಬಂಧಿತರಾಗಿ ಇಲ್ಲಿ ಗೆ ಕರೆತರಲ್ಪಟ್ಟರು

ಬಸ್‌ನವರ ಕುಂದುಕೊರತೆ

ಮೈಸೂರು ಚಾಮರಾಜ ರಸ್ತೆಯಲ್ಲಿ ರುವ ರ್ಯಾಷನಲಿಸ್ಟ್ ಕಚೇರಿಯಲ್ಲಿ ನಿನ್ನೆ ಮಧ್ಯಾಹ್ನ ಮೈಸೂರು ಜಿಲ್ಲಾ ಆಟೊಮೊಬೈಲ್ ಸಂಘದ ವರು ಏರ್ಪಡಿಸಿದ್ದ ಜಹಾ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಜಿ ಆರ್ ಜೋಸ್ಕರ್ ಸ್ವಾಗತ ಭಾಷಣ ಮಾಡಿ, ಬಸ್‌ನವರ ಬಗ್ಗೆ ಸರ್ಕಾರದಿಂದ ಆಗು ತ್ತಿರುವ ತೊಂದರೆ ಪ್ರಸ್ತಾಪಿಸಿ, ಪರಿಸ್ಥಿ ತಿಯನ್ನು ದುರ್ಯೋಧನನ ಸಭೆಯಲ್ಲಿ ದ್ರೌಪದಿ ವಸ್ತ್ರಾಪಹರಣಕ್ಕೆ ಹೋಲಿ ಸಿ, ವಸ್ತ್ರಾಪಹರಣ ಆಗುತ್ತಿದೆ ಎಂದು ಬಸ್‌ನವರು ಹೇಳುತ್ತಿದ್ದಾರೆ, ಕೃಷ್ಣ ನಂತಿರುವ ನೀವು ಅವರ ವಸ್ತ್ರಾಪಹರ ಣವನ್ನು ನಿಲ್ಲಿಸಿ ಎಂದು ಪತ್ರಿಕೆಯವರ ನ್ನು ಕುರಿತು ನುಡಿದರು ಶ್ರೀ ನರಸಿಂ ಹಯ್ಯಂಗಾರ್ಯರು ಮಾತನಾಡುತ್ತಾ,, ಸರ್ಕಾರ ಈಗಿನ ನೀತಿಯಂತೆ ಮುಂದು ವರಿದರೆ ಸಾಲ ಮಾಡಿ ಬಂಡವಾಳಹಾಕಿ ರುವ ಬಸ್‌ಸವನೇಕರು ಕೆಲವೇ ದಿನಗ ಳಲ್ಲಿ ದಿವಾಳಿಯಾಗುವರು ಎಂದರು ಶ್ರೀಗಳಾದ ಎಸ್. ಸಂಗಯ್ಯನವರು ಕೆ ನಾರಾಯಣರಾಯರು ಮಾತನಾಡಿ ಖಾಸಗಿ ಬಸ್‌ನವರು ಉಳಿಯಲು ಅವ ಕಾಶ ಮಾಡಿಕೊಡಬೇಕೆಂದು ತಿಳಿಸಿದರು

ಕಾಂಗ್ರೆಸ್ ಒಡೆದರೂ ಚಿಂತೆಯಿಲ್ಲ

ನವ ದೆಹಲಿ 14 — ಭೂ ಸುಧಾರ್ಣೆ ವಿಷಯದಲ್ಲಿ ನಾಗ್ಪುರ ಕಾಂಗ್ರೆಸಿನ ನಿ ರ್ಣಯದ ಬಗ್ಗೆ ಪಾರ್ಲಿಮೆಂಟರಿ ಕಾಂ ಗ್ರೆಸ್ ಪಾರ್ಟಿ ಸಭೆಯಲ್ಲಿ ಪಂ|| ನೆಹ್ರು ಜೋರಾಗಿ ವಾದಿಸುತ್ತಾ, ಈ ವಿಚಾ ರದಲ್ಲಿ ಕಾಂಗ್ರೆಸಿನಲ್ಲಿ ಒಡಕು ಉಂ ಟಾದರೂ ಪರವಾಯಿಲ್ಲ ಎಂದರು ಇ ದರ ವಿರೋಧಿಗಳು ಕಾಂಗ್ರೆಸ್ ಬಿಟ್ಟು ಹೋಗಬಹುದೆಂದು ತಿಳಿಸಿದರು

ಸಂಘದ ಸಮಾಪ್ತ ಸಮಾರಂಭ

ನೈಸೂರಿನ ಸೆಂಟ್ ಫಿಲೊಮೆನಾ ಕಾಲೇಜ್ ವಿದ್ಯಾರ್ಥಿನಿಲಯ ಸಂಘದ ಸಮಾಪ್ತ ಸಮಾರಂಭ ನಿನ್ನೆ ಸಂಜೆ ವಿ ದ್ಯಾರ್ಥಿನಿಲಯ ಪ್ರದೇಶದಲ್ಲಿ ಮೈಸೂರು ರಾಜ್ಯಪಾಲರ ಘನ ಅಧ್ಯಕ್ಷತೆಯಲ್ಲಿ ವೈಭವದಿಂದ ನೆರವೇರಿತು ಫಾ|| ಅಡಿ ಯೋರವರು ಸ್ವಾಗತ ಭಾಷಣ ಮಾಡಿ ದರು ಸಂಘದ ಅಧ್ಯಕ್ಷರಾದ ಫಾ|| ಥಾಮಸ್ ವಾರ್ಷಿಕ ವರದಿಯನ್ನು ಓದಿ ಒಪ್ಪಿಸಿದರು ರಾಜ್ಯ ಪಾಲರವರಿಗೆ ಮಾನಪತ್ರ ಅರ್ಪಿಸಿದರು. ಶ್ರೀ ಕೆ ಟಿ. ಥಾಮಸ್ ನಿಲಯದ ವರ ದಿಯನ್ನು ಅರ್ಪಿಸಿದರು. ಹಿರಿಯ ವಿದ್ಯಾ ರ್ಥಿಗಳಿಗೆ ಶ್ರೀ ಎಸ್. ಕೆ. ರಾಜಂ ಟೋ ಸ್ಟ್ ಸರಿಸಿದರು ಶ್ರೀ ಕಂಡಯ್ಯನವರು ಅದಕ್ಕೆ ಉತ್ತರವಿತ್ತರು ಶ್ರೀ ಮನೋ ಹರ್ ಸೆಟ್ಟಿಯವರು ವಂದನಾರ್ಪಣೆ ಮಾ ಡಿದರು

ಆಸ್ಪತ್ರೆಯಲ್ಲಿ ಕೊಲೆ

ಕೈರೊ 14 — ಕುರ್ದಿಷ್ ಆಸ್ಪತ್ರೆ ಕೆಲಸಗಾರನೊಬ್ಬ ಇಂತಾಕಿ ದಂಗೆಕಾರ ನಾಯಕ ಕ್ಷಿ ಅಬ್ದುಲ್ ವಾಹಾಬ್' ಷಾ ವಾಘಂನ್ನು ಇವಾಲ್ವರಿನಿಂದ ಆಸ್ಪತ್ರೆಯ ಲ್ಲಿಯೇ ಕೊಡೆದುಕೊಂದನು 10 ಸ ಹಸ್ರ ದಿನಾರು ಬಹುಮಾನದ ಆಸೆಗೆ ಈ ಕೆಲಸ ಮಾಡಿದನು

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ ಸುದರ್ಶನ್ ಜೋಯಿಸರಿಂದ

17 ಅಪ್ಪಮಿ ಮೃಗಶಿರಂ

× ಮೈಸೂರು ಮುಖ್ಯ ಮಂತ್ರಿಯವರು 18 ರಂದು ಸಂಜೆ 6 ಗಂಟೆಗೆ ಬೆಂಗಳೂರು ಪುರಭವನದಲ್ಲಿ ಸಂತವಾಸ್ತವ್ಯ ಚೋದ್ಯ ನಾ ವಿವಾಹವನ್ನು [illegible] ಮಾ ಡುವರು

ವಿವಿಧ ವರ್ತಮಾನ

ಬೆಂಗಳೂರು 14— ಕೊಡಗಿನಲ್ಲಿ ಹಿಡಿಯಲ್ಪಟ್ಟಿರುವ 24 ಆನೆಗಳಿಗೆ ತಲಾ 150 ರಿಂದ 200 ರೂಗಳವರೆಗೆ ಖರ್ಚಾಗುತ್ತಿರುವುದಾಗಿ ಶಾಸನ ಸಭೆಯಲ್ಲಿ ವ್ಯವಸಾಯ ಮಂತ್ರಿ ಪಾಟೀಲರು ಹೇಳಿದರು.

ಬೆಳಗಾಂ 12— ಇಲ್ಲಿಗೆ ಹತ್ತಿರದಲ್ಲಿರುವ ಯಾಮುನಾನವಾರಡಿಯಲ್ಲಿ ಬೊಂಬಾಯಿ ರಾಜ್ಯಕ್ಕೆ ಹೋಗುತ್ತಿದ್ದ 8 ಟ್ರಕ್ಕುಗಳಲ್ಲಿ ತುಂಬಿದ್ದ 722 ಚೀಲ ಅಕ್ಕಿಯನ್ನು ಪೋಲೀಸರು ವಶಪಡಿಸಿಕೊಂಡು 9 ಮಂದಿಯನ್ನು ದಸ್ತಗಿರಿ ಮಾಡಿದರು.

ಹುಬ್ಬಳ್ಳಿ 14— ಧಾರವಾಡದ ಆರ್ಥಿಕ ಸಂಶೋಧನಾ ಸಂಸ್ಥೆಯ ಆಶ್ರಯದಲ್ಲಿ ಗುಜರಾತ ವಿಶ್ವವಿದ್ಯಾಲಯದ ಆರ್ಥಿಕ ಅಧ್ಯಾಪಕ ಪ್ರೊ || ಶನಾಯರು ಮಾತನಾಡುತ್ತಾ, ಬೆಲೆಗಳನ್ನು ಸಂಪಡಿಸಲು ಮತ್ತು ಫಾರಿನ್ ಎಕ್ಸ್ಚೇಂಜನ್ನು ಉತ್ಕರ್ಷಪಡಿಸಲು ಭಾರತದ ರೂಪಾಯಿ ಮೌಲ್ಯವನ್ನು ಇಳಿಸಲು ಉತ್ತಮ ಮಾಡಿದರು.

ಲಕ್ನೋ 14— ಉತ್ತರ ಪ್ರದೇಶದ ಎಲ್ಲಾ ಮುಖ್ಯ ನಗರದಲ್ಲಿ ಪ್ರಕಟವಾಗುವ ಸುಮಾರಾಗಿ ಎಲ್ಲಾ ಇಂಗ್ಲೀಷು ಮತ್ತು ಭಾಷಾ ಪತ್ರಿಕೆಗಳು, ಉತ್ತರ ಪ್ರದೇಶದ ಕಾರ್ಯನಿರತ ಪತ್ರಿಕೋದ್ಯೋಗಿ ಸಂಘದ ಕಾರ್ಯಾಚರಣ ಸಮಿತಿಯು 24 ಗಂಟೆಕಾಲ ಸಾಂಕೇತಿಕ ಮುಷ್ಕರ ನಡೆಸಲು ಇತ್ತ ಕರೆಯನ್ನನುಸರಿಸಿ ' ಪತ್ರಿಕಾ ದಿನ ' ವನ್ನಾಚರಿಸಿ, ತಮ್ಮ ಕಚೇರಿಗಳನ್ನು ಬಂದುಮಾಡಿದ್ದರು.

ಸರ್ವೋದಯ ತತ್ವ

(ಮುಂದುವರಿದ್ದುದು)

ಮನುಷ್ಯ ಜೀವನವು ದೇವನ ಮತ್ತು ಧರ್ಮದ ಮಧ್ಯೆ ವಿಕಾಸವಾಗಬೇಕು ; ಜಗತ್ತಿನ ಸ್ವರೂಪವನ್ನೂ ತನ್ನ ಸ್ವರೂಪವನ್ನೂ ತನಗೂ ಜಗತ್ತಿಗೂ ಇರುವ ಸಂಬಂಧವನ್ನೂ ಅರಿತು ನಡೆದರೆ ಮಾತ್ರ ವ್ಯಕ್ತಿಗೂ ಶಾಂತಿ, ಲೋಕಕ್ಕೂ ಶಾಂತಿ ; ಆದುದರಿಂದ ನಮ್ಮ ಲಕ್ಷ್ಯವು ನಮ್ಮ ಶಾಂತಿಕಡೆಗೆ ಹೇಗೋ ಹಾಗೆ ಜಗತ್ತಿನ ಶಾಂತಿಯ ಕಡೆಗೂ ಪ್ರವಹಿಸಬೇಕು : ಸಾಮಾನ್ಯವಾಗಿ ಮನುಷ್ಯನು ತಾನು ಸುಖವಾಗಿರಬೇಕೆಂದೂ, ತನ್ನ ಹೆಂಡತಿ ಮಕ್ಕಳು ಸುಖವಾಗಿರಬೇಕೆಂದೂ ಅದಕ್ಕಾಗಿ ದುಡಿಯುತ್ತಾನೆ : ತನ್ನ ಲಾಭಕ್ಕಾಗಿ ದುಡಿಯುವದು ಅತನಿಗೆ ಸಮಾಧಾನ , ನಿರೀಕ್ಷಿಸಿದಂತೆ ಅತನಿಗೆ ಲಾಭವು ಬಾದೊಡನೆ ತೃಪ್ತಿ, ಆನಂದ : ಆದಲ್ಲದೆ ಇತರರಿಗಾಗಿ ದುಡಿಯಬೇಕಾಗಿ ಬಂದಾಗ, ತನಗೆ ಅಲ್ಲಿ ಲಾಭವಿಲ್ಲವೆಂದು ತಿಳಿದಾಗ ಉತ್ಸಾಹವು ತಗ್ಗಿ ಉದಾಸೀನನಾಗುವುದು ಮನುಷ್ಯನ ಸ್ವಭಾವವೇ ; ರಾಷ್ಟ್ರದ ಭೂವಿಭಾಗವನ್ನೆಲ್ಲಾ ಸರಕಾರವೇ ವಹಿಸಿಕೊಂಡಿರುವ ರಷ್ಯಾ ದೇಶದಲ್ಲಿಯೂ ಸಹಾ ವ್ಯಕ್ತಿಯು ತೃಪ್ತಿಗಾಗಿ ಅವನ ಸ್ವಂತಕ್ಕಾಗಿ ಎಂಡು ಎಕರೆ ಜಮೀನನ್ನು ಸ್ವಲ್ಪ ಆಸ್ತಿಯನ್ನು ಸರಕಾರವು ಬಿಟ್ಟಿರುವುದೆಂದು ಕೇಳಿದ್ದೇವೆ ; ಅದು ದರಿಂದ ತನಗಾಗಿ ದುಡಿಯುವ, ಅದಲ್ಲೇ ತೃಪ್ತಿಹೊಂದುವ ಮನುಷ್ಯನು ಇತರರಿಗಾಗಿ ದುಡಿಯಬೇಕಾದರೆ ಅತನ ಆತ್ಮವು ಬೆಳೆಯಬೇಕು, ಭಾವವು ವಿಶಾಲವಾಗಬೇಕು ; ತನಗೆ ಈ ಜಗತ್ತಿನಲ್ಲಿ ಅಧಿಕಾರವೆಷ್ಟು ಎಂಬುದನ್ನು ತಿಳಿದಲ್ಲದೆ ಮನುಷ್ಯನು ನಿಸ್ವಾರ್ಥಸೇವೆಗೆ, ನಿಷ್ಕಾಮ ಸೇವೆಗೆ ಯೋಗ್ಯನಾಗಲಾರ

ನಾನು, ನನ್ನದು ಎಂಬ ಅಭಿಮಾನಕ್ಕಾಗಿ ಶುತ್ತಾಗದಿರುವ ಪ್ರಾಣಿಯು ಜಗತ್ತಿನಲ್ಲಿಲ್ಲವೇ ಇಲ್ಲ ; ಇದನ್ನು ಮೂಲಾದೇವಿಯು ಮನುಷ್ಯನ-ಪ್ರಾಣಿಯು ವಿವೇಕವನ್ನು ಮುಚ್ಚಿ ಮೋಹಗೊಳಿಸುವ ಮೋಸದ ಅವರಣ ಅಥವಾ ಸಂ ಮೋಹನಶಾಸ್ತ್ರ ಎಂದು ಹೇಳಬಹುದು

ಭದ್ರಾವತಿಯಲ್ಲಿ ಜೈ ಜಗತ್ ಎಂದು ವಿನೋಬಾರವರ ಮುಂದೆ ಕೂಗಿದ ಜನಸಮೂಹದಲ್ಲಿ ಎಷ್ಟು ಜನ ಜಗತ್ತಿಗಾಗಿ ತಮ್ಮನ್ನು ದಿವಾಳಿಮಾಡಲು ಶಕ್ತರಾಗವರೆಂಬುದು ಅವರವರ ಅಂತಃಕರಣಗಳಿಗೇ ಗೊತ್ತು ; ಬರೀ ಬೂಟಾಟಿಕೆಯಿಂದಾಗಲೀ, ಘೋಷಣೆಯಿಂದಾಗಲೀ ಕಾರ್ಯವು ಸಾಗದು ; ಒಂದಾವೃತ್ತಿ ದಾನವಾಡಿದ ವಸ್ತುವನ್ನು ಪಂದಿರುಗಿ ತೆಗೆದುಕೊಳ್ಳಲಾಗದು ; ದಾನವು ಸರ್ವತ್ರ ಸರ್ವದಾ ದಾನವೇ ಆಗಬೇಕು : ದಾನವು ದಾಕ್ಷಿಣ್ಯಗಳಿಗಾಗಲೀ, ಮತ್ತಾವ ಬಹಿರಾಡಂಬದಿಂದಾಗಲೀ ಕೊಡಲ್ಪಡಬಾರದು. [ಸೆ. ಸ]

ಪುರುಷರು ಅದಕ್ಕಾಗಿ ಮೋಹಪಡುತ್ತಾರೆ !

ಸ್ತ್ರೀಯರು ಅದನ್ನು ಮೆಚ್ಚುತ್ತಾರೆ !

ಅದು ಏನು !

ಗುಲಾಬಿ ಎಸಳಿನಂತೆ ಕೋಮಲವಾದ, ಸ್ವಚ್ಛವಾದ ಮತ್ತು ಮೃದುವಾದ ಚರ್ಮ. ಆರೋಗ್ಯದ ಉಜ್ವಲತೆ ಹೊಂದಿರುವ ಚರ್ಮ ಒಲುಮೆ ಕಾಣಿಸುವ ಮತ್ತು ವಿಜಯ ಹೊಂದುವ ಚರ್ಮವನ್ನು ಇದೇ :

ಸೂರಿಮಾಡುವ ಸುಂದರ ಚರ್ಮ.

ಮೈಸೂರು ಗಂಧದ ಸಾಬೂನು

ಇವೆಲ್ಲವನ್ನೂ ನಿಮ್ಮ ನಿಲುಕಿನ ಹತ್ತಿರದಲ್ಲಿಯೇ ತರುತ್ತದೆ.

ಪ್ರತಿಯೊಬ್ಬರು ಅಚ್ಚುಮೆಚ್ಚಿನ ಈ ಸೌಂದರ್ಯ ಸಾಬೂನನ್ನು ಉಪಯೋಗಿಸಿ.

ಸರ್ಕಾರಿ ಸಾಬೂನು ಕಾರ್ಖಾನೆ

ಬೆಂಗಳೂರು 3.

— ಇವರಿಂದ ತಯಾರಿಸಲ್ಪಟ್ಟಿದು —

ವುಡ್‌ಲಾಂಡ್ಸ್ 13-3-59 ರಿಂದ

ಅಮೋಘ ಆರಂಭ

— ನವಕೇತನ —

ಕಾಲಾಪಾನಿ (ಹಿಂದಿ)

ಅತ್ಯುತ್ತಮ ಪತ್ತೇದಾರಿ ಕಥಾವಸ್ತು — | ದಿನ 3 ಪ್ರದರ್ಶನಗಳು

ಬಹಳ ದಿನಗಳಿಂದಲೂ ಎದುರುನೋಡುತ್ತಿದ್ದ ಚಿತ್ರ

ತಾರಾಗಣ— ದೇವ್‌ಆನಂದ್, ಮಧುಬಾಲ, ನಳಿನಿಜಯವಂತ್, ಕಿಶೋರ್‌ಸಾಹು

ನಿರ್ದೇಶನ ರಾಜ್ ಖೋಸ್ಲ — ನೋಡಲು ಮರೆಯಬೇಡಿ — ಸಂಗೀತ ಎಸ್. ಡಿ. ಬರ್ಮನ್

ಅಪೆರಾ— 14-3-59 ರಿಂದ

ಅಮೋಘ ತೆಲುಗು ಚಿತ್ರ ಪ್ರತಿದಿನ 3 ಆಟಗಳು

ಸಂತೋಷ

ಪಾತ್ರ— ಎನ್ ಟಿ ರಾಮರಾವ್, ಅಂಜಲಿ, ನಾಗೇಂದ್ರರಾವ್, ಲೀಲಾಗಿ

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ For Quality Printing

ಅಶೋಕಾ ಫಾರ್ಮಸಿ L. N. Press

ಅಶ್ವಾನ್ಸ್‌ಡ್ರಾಪ್ ಬಜಾರ್ ಮೈಸೂರು Sivarampet, Mysore

Edited, Printed & Published by Dharma Prachara Niratha [illegible] Krishna Rao, at the Satyavadi Press Chamarajapuram, Mysore.